ಜೊತೆಗೆ ಪ್ರತಿ ಪ್ರದೇಶದ ಅವಶ್ಯಕತೆಗನುಗುಣವಾಗಿ ಭೂಸಾರ ಮತ್ತು ತೇವಾಂಶ ಸಂರಕ್ಷಣಾ ಕೆಲಸಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವ ಮೂಲಕ ಗಣಿಗಾರಿಕೆಯಿಂದ ಅರಣ್ಯ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಲಾಗುತ್ತದೆ.

414. **ಶ್ರೀ ವಿ. ಸೋಮಣ್ಣ:–** ಮಾನ್ಯ ಬೃಹತ್, ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಎನ್‌ಜಿಇಎಫ್ ಕಾರ್ಖಾನೆ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಯಾವಾಗ ಮುಚ್ಚಲಾಯಿತು;

(ಆ) ಈ ಕಾರ್ಖಾನೆಯಲ್ಲಿ ಹಾಲಿ ಇರುವ ಕಾರ್ಮಿಕರ ಸಂಖ್ಯೆ ಎಷ್ಟು;

(ಇ) ಈ ಕಾರ್ಖಾನೆಯನ್ನು ಮುಚ್ಚಲು ಕಾರಣಗಳೇನು;

(ಈ) ಈ ಕಾರ್ಖಾನೆಗೆ ಸರ್ಕಾರ ಹೂಡಿರುವ ಬಂಡವಾಳವೆಷ್ಟು;

(ಉ) ಈ ಕಾರ್ಖಾನೆಯನ್ನು ಪುನರಾರಂಭಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಊ) ಇದಕ್ಕಾಗಿ ಸರ್ಕಾರ ವೆಚ್ಚ ಮಾಡುವ ಹಣವೆಷ್ಟು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಬೃಹತ್, ಮಧ್ಯಮ ಕೈಗಾರಿಕಾ ಸಚಿವರು):–

(ಅ) ಪ್ರಾರಂಭವಾದ ದಿನಾಂಕ ಏಪ್ರಿಲ್ 1965, ಮುಚ್ಚಲಾದ ದಿನಾಂಕ ಡಿಸೆಂಬರ್ 2002.

(ಆ) ಈ ಕಾರ್ಖಾನೆಯಲ್ಲಿ ಹಾಲಿ ಯಾವುದೇ ಕಾರ್ಮಿಕರಿರುವುದಿಲ್ಲ

(ಇ) ಪ್ರತಿಕೂಲ ಮಾರುಕಟ್ಟೆ ಪರಿಸ್ಥಿತಿ, ಹಳೆಯ ತಂತ್ರಜ್ಞಾನ, ನಿರ್ವಹಣಾ ಚಾತುರ್ಯತೆಯ ಕೊರತೆ ಇತ್ಯಾದಿಯಿಂದಾಗಿ ಕಾರ್ಖಾನೆಯನ್ನು ಮುಚ್ಚಲಾಗಿದೆ.

(ಈ) ರೂ. 4199 ಲಕ್ಷ (ಷೇರು ಬಂಡವಾಳದ 90.28%)

(ಉ) ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಷೇರು ಬಂಡವಾಳದ ಶೇ. 51ರಷ್ಟು ಭಾಗವನ್ನು ಓರ್ವ ಆಯಕಟ್ಟಿನ ಪಾಲುದಾರಿಗೆ ನೀಡಿ ಎನ್‌ಜಿಇಎಫ್‌ನ ಮೋಟಾರ್ಸ್ ಹಾಗೂ ಟ್ರಾನ್ಸ್‌ಫಾರ್ಮರ್ ವಿಭಾಗಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ಉದ್ದೇಶಿಸಿದೆ. ಇದಕ್ಕಾಗಿ ಸರ್ಕಾರದಿಂದ ಯಾವುದೇ ವೆಚ್ಚ ಮಾಡುವ ಅವಶ್ಯಕತೆಯಿರುವುದಿಲ್ಲ.